ಪರಿಸ್ಥಿತಿಗನುಸಾರವಾಗಿ ಕೈಗೊಂಡ ತೀರ್ಮಾನಗಳಿಗೂ ಒಂದು ನಿರ್ದಿಷ್ಟವಾದ ಕೊಂಡಿಯಿಲ್ಲವಾಗುತ್ತದೆ. ಶಿಖರದಲ್ಲಿರುವವರು ಒಂಟಿಯಾದ್ದರಿಂದ ಕೆಳಗೆ ಬೀಳುವ ಸಾಧ್ಯತೆ ಹೆಚ್ಚು. ಹಿಂದಿನ ಕಾಲದ ರಾಜರಂತೆ ಛದ್ಮವೇಷ ಧರಿಸಿ ಪ್ರಜೆಗಳ ನಡುವೆ ಓಡಾಡಲು ಎಸ್. ಪಿ.ಜಿ. ಒಪ್ಪುವುದಿಲ್ಲ. ಹೀಗಾಗಿ ಪ್ರಜೆಗಳನ್ನು ಆಳುವ ನಾವೇ ಆಯ್ದ ರಾಜರು – ಭ್ರಮೆಯಲ್ಲೇ ಬದುಕಿ, ಭ್ರಮೆಯಿಂದಲೇ ಪತನಗೊಳ್ಳಬಹುದು ಎನ್ನುವುದನ್ನು ನೀರಜಾ ಸೂಚ್ಯವಾಗಿ ಹೇಳುತ್ತಾರೆ.

ಅತ್ಯಂತ ಕಡಿಮೆ ಅವಧಿಯಲ್ಲಿ ಪ್ರಧಾನ ಮಂತ್ರಿಗಳ ಹುದ್ದೆಯನ್ನಲಂಕರಿಸಿದವರು ಐವರು – ಚರಣ್ ಸಿಂಗ್, ವಿ.ಪಿ. ಸಿಂಗ್, ದೇವೇಗೌಡ, ಗುಜ್ರಾಲ್, ಚಂದ್ರಶೇಖರ್. ಈ ಐದೂ ಜನ, ಪ್ರತಿದಿನದ ದೌರ್ಬಲ್ಯ, ಸರ್ಕಾರವನ್ನು ಯಾರಾದರೂ ಯಾವಾಗಲಾದರೂ ಉರುಳಿಸಬಹುದೆನ್ನುವ ಭಯದಲ್ಲೇ ಕಳೆದವರು. ಚರಣ್ ಸಿಂಗ್ ಅಂತೂ ಒಮ್ಮೆಯೂ ಸಂಸತ್ತನ್ನು ಎದುರಿಸಿದವರಲ್ಲ. ಈ ಎಲ್ಲರ ನಡುವೆ ಒಂದು ದೊಡ್ಡ ಹಾಗೂ ಮಹತ್ವದ ತೀರ್ಮಾನವನ್ನು ಕೈಗೊಂಡವರು ವಿ.ಪಿ. ಸಿಂಗ್. 'ಮಂಡಲ ಆಯೋಗ'ದ ವರದಿ ಹತ್ತು ವರ್ಷಗಳಿಂದ ದೂಳು ತಿನ್ನುತ್ತಿತ್ತು. ಅದರ ಜಾರಿಯ ಬಗ್ಗೆ ಆಯೋಗದ ಅಧ್ಯಕ್ಷ ಬಿ.ಪಿ. ಮಂಡಲ್‌ಗೇ ನಂಬಿಕೆಯಿರಲಿಲ್ಲ – ಯಾವುದೇ ಸರ್ಕಾರದ ವರದಿಯನ್ನು ಗೃಹ ಮಂತ್ರಿಗಳಿಗೆ ಸಮರ್ಪಿಸುವಂತೆ ಇದನ್ನೂ ಸಲ್ಲಿಸಿದ್ದರು. ಆದರೆ ರಾಜಕೀಯ ಪರಿಸ್ಥಿತಿಯಿಂದಾಗಿ ವಿ.ಪಿ. ಸಿಂಗ್ ಅದನ್ನು ಹೊರತೆಗೆದು ದೇಶದ ರಾಜಕೀಯದ ದಿಕ್ಕನ್ನೇ ಬದಲಿಸುತ್ತಾರೆ. ಸಿಂಗ್ ಕಾರ್ಯಕಾಲ ಹೆಚ್ಚಿಲ್ಲದಿದ್ದರೂ, ದೇಶದ ರಾಜಕೀಯದ ದಿಕ್ಕನ್ನು ಮೂಲಭೂತವಾಗಿ ಬದಲಿಸುವ ತೀರ್ಮಾನವನ್ನು ಅವರು ಕೈಗೊಳ್ಳುವುದು ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲು. ಹೆಚ್ಚುದಿನ ಕುರ್ಚಿ ಉಳಿಯದಿದ್ದರೂ, ಮಾಡಿದ ತೀರ್ಮಾನ ಇಂದೂ ಜಾರಿಯಲ್ಲಿದೆ.

ಪಿ.ವಿ. ನರಸಿಂಹ ರಾವ್ ಕಾರ್ಯಕಾಲವನ್ನು ಮೂಲಭೂತವಾಗಿ ಗುರುತಿಸಬೇಕಾದದ್ದು ಅವರ ಆರ್ಥಿಕ ಉದಾರೀಕರಣದ ನೀತಿಯಿಂದ. ಅದನ್ನು ವಿತ್ತ ಮಂತ್ರಿಗಳಾದ ಮನಮೋಹನ ಸಿಂಗ್ ಸಾರಥ್ಯದಲ್ಲಿ ಸಾಧಿಸಲಾಯಿತಾದರೂ, ಮನಮೋಹನ ಸಿಂಗ್‌ರ ತಾಂತ್ರಿಕತೆಗೆ ರಾಜಕೀಯವಾದ ಕವಚವನ್ನು ಕೊಟ್ಟದ್ದು ನರಸಿಂಹ ರಾವ್. ಆದರೆ ಈ ಪುಸ್ತಕದಲ್ಲಿ ನರಸಿಂಹ ರಾವ್ ಅವರನ್ನು ನೀರಾಜಾ ಅವರು ಗುರುತಿಸುವುದು ಅವರು ಮಾಡಿದ ತೀರ್ಮಾನಕ್ಕಾಗಿ ಅಲ್ಲ. ಬದಲಿಗೆ ಅವರು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುತ್ತಿರಲಿಲ್ಲ ಎನ್ನುವ ಮಾತನ್ನು ಗುರುತಿಸಬೇಕು ಎನ್ನುವಂತೆ ಬಾಬ್ರಿ ಮಸೀದಿಯ ವಿಧ್ವಂಸಕ ಘಟನೆಗಳ ಸುತ್ತಲಿನ ರಾಜಕೀಯವನ್ನು ವಿವರಿಸುತ್ತಾರೆ. ಒಂದು ಮಟ್ಟದಲ್ಲಿ ಮಸೀದಿ ಇಲ್ಲವಾದರೆ, ಅದರಿಂದ ಉದ್ಭವವಾಗುವ ಸಮಸ್ಯೆಯೂ ಇಲ್ಲವಾಗುತ್ತದೆ ಎನ್ನುವ ವಾದವನ್ನು ರಾವ್ ಒಂದೆಡೆ ಒದಗಿಸಿದ್ದರು ಎಂದು ಈ ಪುಸ್ತಕ ಹೇಳುತ್ತದೆ. ಇನ್ನೊಂದು ಭಾವನೆಯಲ್ಲಿ ರಾವ್ ಬಲಪಂಥೀಯರೊಂದಿಗೆ ಅವ್ಯಕ್ತವಾಗಿ ಕೈ ಮಿಲಾಯಿಸಿದ್ದಿರಬಹುದು ಎನ್ನುವ ಅನುಮಾನವೂ ಬರುತ್ತದೆ. ಯಾವುದೇನೇ ಇರಲಿ, ಒಂದು ದೇಶದ ವರ್ತಮಾನ ಮತ್ತು ಭವಿಷ್ಯವನ್ನು ಆಮೂಲಾಗ್ರವಾಗಿ ಬದಲಾಯಿಸುವಂತಹ ಘಟನೆ ನಡೆಯುತ್ತಿದ್ದಾಗ ನರಸಿಂಹರಾವ್‌ತಮ್ಮನೈತಿಕಕರ್ತವ್ಯವನ್ನುಕೈಗೊಳ್ಳಲಿಲ್ಲ ಎನ್ನುವ ಭಾವನೆ ಓದುಗರಿಗೆ ಉಂಟಾಗುತ್ತದೆ. ಕಡೆಗೆ ಅವರು ನಿಧನರಾದಾಗ ಪಾರ್ಥಿವ ಶರೀರವನ್ನು ಕಾಂಗ್ರೆಸ್ ಪಕ್ಷದ ಕಾರ್ಯಾಲಯಕ್ಕೆ ಒಯ್ಯಲು ಅನುಮತಿ ಸಿಗದಿದ್ದದ್ದು ಈ ಮೂಲಭೂತ ಸೈದ್ಧಾಂತಿಕ ಮತಭೇದದಿಂದಲೇ ಎನ್ನುವ ಪ್ರಶ್ನೆ ನಮ್ಮಲ್ಲಿ ಉಳಿಯುತ್ತದೆ. ಆರ್ಥಿಕ ನೀತಿಯಲ್ಲಿ ಯಶಸ್ವೀ ಎಂದು ಪರಿಗಣಿಸಬಹುದಾದ ಪ್ರಧಾನಮಂತ್ರಿಗಳ ರಾಜಕೀಯ ತೀರ್ಮಾನವು ಇಂದಿಗೂ ನಮ್ಮ ರಾಜಕೀಯವನ್ನು ರೂಪಿಸುತ್ತಿರುವುದನ್ನು ನಾವು ಕಾಣಬಹುದು. ಇದರ– ಈ ತೀರ್ಮಾನದ– ಅಥವಾ ತೀರ್ಮಾನವಲ್ಲದ ತೀರ್ಮಾನದ ಫಲಶ್ರುತಿಯನ್ನು ನಾವು ಇಂದಿಗೂ ಅನುಭವಿಸುತ್ತಿದ್ದೇವೆ.

ಅಟಲ್ ಬಿಹಾರಿ ವಾಜಪೇಯಿ ಕಾಲವನ್ನು ನಾವು ನೆನಪು ಮಾಡಿಕೊಳ್ಳುವುದು ಅವರ ಕಾಶ್ಮೀರ ನೀತಿ, ಪಾಕಿಸ್ತಾನಕ್ಕೆ ಕೈಗೊಂಡ ಬಸ್ ಯಾತ್ರೆ, ಕಾರ್ಗಿಲ್ ಯುದ್ಧ ಮತ್ತು ಆಗ್ರಾದಲ್ಲಿ ಮುಷರ್ರಫ್ ಜೊತೆ ನಡೆಸಿದ ಶಿಖರ ವಾರ್ತೆಗಳಿಂದಾಗಿ. ಈ ಚಿತ್ರ ನಮಗೆ ಸಿಗುವುದು ಒಬ್ಬ ಶಾಂತಿಪ್ರಿಯ, ಕವಿ ಹೃದಯದ ಪ್ರಧಾನ ಮಂತ್ರಿಯದ್ದು.